ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 59/2015　　　　　　CW: 7　　P.W.7

| | |
|---|---|
| ಸಾಕ್ಷಿದಾರರ ಹೆಸರು | ಃ ಪಿ ಎನ್ ನಾಗಾರಾಜ |
| ತಂದೆ/ಗಂಡನ ಹೆಸರು | ಃ ನಂಜುಂಡಪ್ಪ |
| ವಯಸ್ಸು | ಃ 42 ವರ್ಷ |
| ವೃತ್ತಿ | ಃ ವ್ಯವಸಾಯ |
| ವಾಸಸ್ಥಳ | ಃ ಪೂಲವಾರಪಲ್ಲಿ |

**ಪ್ರಮಾಣೀಕರಿಸಲಾದ ದಿಃ 26.12.2022**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ನಿಪಿ 4 ರಲ್ಲಿ ಇರುವ ಸಹಿ ನನ್ನದು. ಸಾಕ್ಷಿಯ ಸಹಿಯನ್ನು ನಿಪಿ **4 (ಬಿ )** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು 7-8 ವರ್ಷಗಳ ಕೆಳಗೆ ಚಿತ್ರವತಿ ಅಣೆಕಟ್ಟಿನ ಬಳಿ ಸಹಿ ಮಾಡಿದ್ದೇನೆ. ನಟರಾಜ್ ಅವರಿಗೆ ಅಪಘಾತವಾದ ಬಗ್ಗೆ ಪೋಲೀಸರು ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ. ವಾಹನ ಸಂಖ್ಯೆ ಕೆ ಎ 35 ಇ 6924, ಸಿ ಡಿ 100 ಬೈಕ್ ಇರುತ್ತದೆ. ಸದರಿ ಬೈಕ್ ಲೈಟ್ ಮತ್ತು ಡೂಮ್ ಹೊಡೆದು ಹೋಗಿದ್ದವು. ನನ್ನ ಜೊತೆ ಚಾಸಾ 5 ಮತ್ತು 6 ರವರು ಸಹಿ ಮಾಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃಃ ಮಾನ್ಯ ಸಸಅ ರವರಿಂದಃ**

ದಿಃ 08.02.2014 ರಂದು ಬೆಳಗ್ಗೆ 11.00 ಯಿಂದ ಮಧ್ಯಾಹ್ನ 12.00 ಗಂಟೆ ವರೆಗೆ ಪಂಚನಾಮೆ ತಯಾರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ** ಃ– ಶ್ರೀ ಕೆ. ಎಸ್ ಆರ್ ರವರಿಂದಃ

ಪೋಲೀಸರು ನನ್ನನ್ನು ಕರೆಸಿರುತ್ತಾರೆ. ಅಪಘಾತವಾದಾಗ ಸ್ಥಳದಲ್ಲಿ 10-15 ಜನ ಇದ್ದರು. ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. ದ್ವಿಚಕ್ರ ವಾಹನವನ್ನು ಟೆಂಪೋ ದಲ್ಲಿ ಸ್ಥಳದಿಂದ ತೆಗೆದುಕೊಂಡು ಬಂದಿರುತ್ತಾರೆ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ.

**ಮರುವಿಚಾರಣೆ** ಃ **ಇರುವುದಿಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ